[ Govt. of Karnataka C.R.P. 67]

| |
|---|
| **Deposition Sheets (RP.No.57) Form No.4** |

**IN THE COURT OF ADDL. CIVIL JUDGE & J.M.F.C., KUSHTAGI.**

**Criminal Case No. 149/2018**

ಪಿ.ಡಬ್ಲ್ಯು ಃ 02 ಸಿ.ಡಬ್ಲ್ಯು ಃ 03

ಸಾಕ್ಷಿದಾರನ ಹೆಸರು ಃ ಶರಣಪ್ಪ
ತಂದೆಯ ಹೆಸರು ಃ ಬಸಪ್ಪ ಕುಷ್ಟಗಿ
ಪ್ರಾಯ ಃ 35 ವರ್ಷ
ಉದ್ಯೋಗ ಃ ಕೂಲಿ ಕೆಲಸ
ವಾಸ ಃ ತಾವರಗೇರಾ

ದಿನಾಂಕ 07.09.2021 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರುಃ-**

ಈಗ ನನಗೆ ತೋರಿಸಿದ ನಿಪಿ-1 ರಲ್ಲಿರುವ ಸಹಿ ನನ್ನದು. ಸದರಿ ದಾಖಲೆಗೆ ಸುಮಾರು 2-3 ವರ್ಷಗಳ ಹಿಂದೆ ತಾವರಗೇರಾ ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ. ಸದರಿ ದಾಖಲೆಯಲ್ಲಿ ಬರೆದಿರುವ ವಿಷಯಗಳು ಮತ್ತು ಅದನ್ನು ಯಾವುದರ ಕುರಿತಾಗಿ ಮಾಡಲಾಗಿತ್ತು ಎಂದು ನನಗೆ ಗೊತ್ತಿಲ್ಲ. ನಿಪಿ-1 ರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ-1(ಬಿ) ಎಂದು ಗುರುತಿಸಲಾಯಿತು. ನನ್ನ ಸಮಕ್ಷಮ ಮಟ್ಕಾ ಜೂಜಾಟ ನಡೆಸುತ್ತಿದ್ದ ಸ್ಥಳಕ್ಕೆ ದಾಳಿ ಮಾಡಿರುವುದಿಲ್ಲ ಮತ್ತು ನನ್ನ ಸಮಕ್ಷಮ ಯಾವುದೇ ವ್ಯಕ್ತಿಯನ್ನು ವಿಚಾರಿಸಿ ಮಹಜರನ್ನು ಜರುಗಿಸಿ ಸ್ವತ್ತುಗಳನ್ನು ಸ್ವಾಧೀನ ಪಡಿಸಿಕೊಂಡಿರುವುದಿಲ್ಲ. ಈ ದಿನ ನ್ಯಾಯಾಲಯದ ಮುಂದೆ ಇರುವ ಮಟ್ಕಾ ಚೀಟಿ, ಹಣ ಮತ್ತು ಬಾಲ ಪೆನನ್ನು ಈ ಹಿಂದೆ ನೋಡಿರುವುದಿಲ್ಲ. ಈ ದಿನ ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನೋಡಿರುತ್ತೇನೆ ಮತ್ತು ಅವರ ಪರಿಚಯ ಇದೆ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಸಸಅ ರವರು ಅನುಮತಿ ಕೋರಿರುತ್ತಾರೆ. ಅನುಮತಿ ನೀಡಲಾಯಿತು)

**<u>ಪಾಟೀ ಸವಾಲು</u> ಃ <u>ಸಹಾಯಕ ಸರ್ಕಾರಿ ಅಭಿಯೋಜಕರುಃ-</u>**

ದಿನಾಂಕಃ 12-07-2017 ರಂದು ಚಾಸಾ-1 ರವರಿಗೆ ತಾವರಗೇರಾ ಪಟ್ಟಣದ ಗೋವಾ ಹೊಟೇಲ್ ಹತ್ತಿರದ ಮುಲ್ಲಾರ ಕಟ್ಟೆಯ ಬಳಿ ಮಟ್ಕಾ ಜೂಜಾಟ ನಡೆಯುತ್ತಿರುವ ಬಗ್ಗೆ ಬಾತ್ಮೀದಾರರಿಂದ ಮಾಹಿತಿ ಬಂದಿದ್ದು ಮತ್ತು ಸದರಿ ಸ್ಥಳಕ್ಕೆ ದಾಳಿ ಮಾಡುವ ಸಲುವಾಗಿ ನನ್ನನ್ನು ಮತ್ತು ಚಾಸಾ-2 ರವರನ್ನು ಪಂಚರನ್ನಾಗಿ ಸಹಕರಿಸುವಂತೆ ತಿಳಿಸಿದ್ದು, ಅದರಂತೆ ನಾನು, ಚಾಸಾ-2 ಮತ್ತು ಠಾಣಾ ಸಿಬ್ಬಂದಿಗಳಾದ ಚಾಸಾ-4 ರಿಂದ 7 ರವರುಗಳು ಸಂಜೆ ಸುಮಾರು 7-15 ಗಂಟೆಗೆ ಠಾಣೆಯಿಂದ ಹೊರಟು ಸಂಜೆಃ 7-20 ಕ್ಕೆ ಹೋಟೇಲ್ ಗೋವಾ ಹತ್ತಿರ ಸ್ವಲ್ಪ ದೂರದಲ್ಲಿ ನಿಂತು ನೋಡಲಾಗಿ ಈ ದಿನ ನ್ಯಾಯಾಲಯದ ಮುಂದೆ ಇರುವ ವ್ಯಕ್ತಿಯು ಮಟ್ಕಾ ಜೂಜಾಟದಲ್ಲಿ ತೊಡಗಿದ್ದು ಮತ್ತು ಒಂದು ರೂಪಾಯಿಗೆ 80 ರೂಪಾಯಿ ಕೊಡುವುದಾಗಿ ಹೇಳಿ ಜನರಿಂದ ಹಣ ಪಡೆದು ಮಟ್ಕಾ ಚೀಟಿಗಳನ್ನು ಬರೆದುಕೊಡುತ್ತಿದ್ದರು ಎಂದರೆ ಸರಿಯಲ್ಲ. ತದನಂತರ ನಾವುಗಳು ಒಮ್ಮೆಲೆ ದಾಳಿ ಮಾಡಿದ್ದು, ಹಾಗೆ ದಾಳಿ ಮಾಡಿದಾಗ ಮಟ್ಕಾ ಬರೆಸುತ್ತಿದ್ದವರು ಪೊಲೀಸರನ್ನು ನೋಡಿ ಓಡಿ ಹೋಗಿದ್ದು ಮತ್ತು ಮಟ್ಕಾ ಬರೆಯುತ್ತಿದ್ದ ಆರೋಪಿಯು ಸಿಕ್ಕಿ ಬಿದ್ದಿದ್ದರು ಎಂದರೆ ಸರಿಯಲ್ಲ. ಹಾಗೆ ಸಿಕ್ಕಿಬಿದ್ದ ಆರೋಪಿಯನ್ನು ವಿಚಾರಿಸಲಾಗಿ ಆತನ ಹೆಸರು ಪ್ರಾಣೇಶರಾವ್ ತಂದೆ ಹನುಮಂತರಾವ್ ದೇಸಾಯಿ, ಪ್ರಾಯ 30 ವರ್ಷ, ವಾಸಃ ತಾವರಗೇರಾ ವಿದ್ಯಾ ನಗರ ಎಂದು ತಿಳಿಸಿ ಮತ್ತು ತಾನು ಮಟ್ಕಾ ಜೂಜಾಟದಲ್ಲಿ ತೊಡಗಿದ್ದಾಗಿ ಒಪ್ಪಿಕೊಂಡಿದ್ದನು ಎಂದರೆ ಸರಿಯಲ್ಲ. ತದನಂತರ ಆರೋಪಿಯ ಅಂಗ ಜಪ್ತಿ ಮಾಡಿ ಆತನ ವಶದಲ್ಲಿದ್ದ ಮಟ್ಕಾ ಜೂಜಾಟಕ್ಕೆ ಸಂಬಂಧಿಸಿದ ಈ ದಿನ ನ್ಯಾಯಾಲಯದ ಮುಂದೆ ಇರುವ ರೂ.1550/- ಮತ್ತು ಮಟ್ಕಾ ಬರೆದ ಚೀಟಿ ಹಾಗೂ ಒಂದು ಬಾಲ್ ಪೆನ್ನನ್ನು ಸ್ವಾಧೀನ ಪಡೆಸಿಕೊಂಡು ರಾತ್ರಿ 7-35 ಗಂಟೆಯಿಂದ 8-20 ಗಂಟೆಯವರೆಗೆ ನಿಪಿ-1 ರಂತೆ ಮಹಜರನ್ನು ಜರುಗಿಸಿದ್ದು ಮತ್ತು ನಾನು ಅದಕ್ಕೆ ಪಂಚರನ್ನಾಗಿ ನಿಪಿ-1(ಬಿ) ರಂತೆ ಸಹಿ ಮಾಡಿದ್ದೆ ಎಂದರೆ ಸರಿಯಲ್ಲ. ನಾನು ಆರೋಪಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲು</u>** ಃ ಆರೋಪಿ ಪರ ಃ ಶ್ರೀಯುತ ವಿ.ಎಸ್.ಎಸ್. ವಕೀಲರಿಂದ ಃ ಏನೂ ಇಲ್ಲ.

ಮರುವಿಚಾರಣೆ ಃ ಇಲ್ಲ

ನನ್ನ ಉಕ್ತಲೇಖನಾ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂ. ಕುಷ್ಟಗಿ